ಉಪಾಧ್ಯಕ್ಷರು : ನೀವು ಕುಳಿತುಕೊಳ್ಳಿ ಇದು ಈ ರೀತಿಯಾದರೆ ಸರಿಯಲ್ಲ. ಇದು ಹೀಗೇ ಆದರೆ ಶೂನ್ಯವೇಳೆಯಲ್ಲಿ ಪ್ರಶ್ನೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಎಂ. ಪಿ. ಅಪ್ಪಚ್ಚುರಂಜನ್ : ನಮ್ಮನ್ನೂ ಕರೆಸಿ ಎಂದು ಹೇಳುತ್ತಿದ್ದೇನೆ.

ಶ್ರೀ ಕೆ. ಎನ್. ನಾಗೇಗೌಡ : ಕರೆಸುತ್ತೇನೆ ಎಂದು ಹೇಳಿದೆ.

ಉಪಾಧ್ಯಕ್ಷರು : ಆಯಿತು. ಈ ರೀತಿ ನೀವು ಒಂದು ಪ್ರಶ್ನೆಗೆ ಹತ್ತು ಹತ್ತು ನಿಮಿಷ ತೆಗೆದುಕೊಂಡರೆ ಹೇಗೆ?

ಶ್ರೀ ಎಂ. ಪಿ. ಅಪ್ಪಚ್ಚುರಂಜನ್ : ಈ ಅಣೆಕಟ್ಟಿನಿಂದ ನಮ್ಮ ತಾಲ್ಲೂಕಿನಲ್ಲಿ ಇಡೀ ಕೊಡಗನ್ನು ಮುಳುಗಿಸಿಬಿಟ್ಟಿರಿ.

ಉಪಾಧ್ಯಕ್ಷರು : ಪ್ರಕಾಶ್ ಹುಕ್ಕೇರಿಯವರೇ, ನೀವು ಕೇಳಿ.

(ಈ) ಹಿಡಕಲ್ ಮತ್ತು ಘಟಪ್ರಭಾ ಯೋಜನೆಯಲ್ಲಿ ಭೂಮಿ ಕಳೆದು ಕೊಂಡವರಿಗೆ ಪರಿಹಾರ

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಸದಲಗಾ) : ಮಾನ್ಯ ಉಪಾಧ್ಯಕ್ಷರೇ, ಇದಕ್ಕೆ ಉತ್ತರ ಕೊಡುವುದಕ್ಕೆ ಕಂದಾಯ ಮಂತ್ರಿಗಳು ಇಲ್ಲ. ಅವರು ಬಂದಮೇಲೆ ಇದನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ : ನಾವು ಹೇಳುತ್ತೇವೆ. ನೀವು ಕೇಳಿ.

ಶ್ರೀ ಪ್ರಾಕಾಶ್ ಬಾಬಣ್ಣ ಹುಕ್ಕೇರಿ : ನಮ್ಮ ಜಿಲ್ಲೆಯಲ್ಲಿ ಹಿಡಕಲ್ ಡ್ಯಾಮ್ ಆಗಲಿ, ಘಟಪ್ರಭಾ ಯೋಜನೆಯಾಗಲೀ, ಭೂಮಾಲೀಕರು ತಮ್ಮ ಜಮೀನನ್ನು ಹಿಡಕಲ್ ಡ್ಯಾಮ್ ಜಾರಿ ಮಾಡುವುದಕ್ಕೆಂದು ಕೊಟ್ಟಿದ್ದಾರೆ. ಆದರೆ ನಮ್ಮ ವಿಶೇಷ ಜಿಲ್ಲಾಧಿಕಾರಿಗಳು ರೈತರು ಏನು ಜಮೀನನ್ನು ಕಳೆದುಕೊಂಡಿದ್ದಾರೆ, ಅದಕ್ಕೆ ಅವರು ದುಡ್ಡು ಕೇಳಿದರೆ ನೀವು ಕೋರ್ಟಿಗೆ ಹೋಗಿ, ನ್ಯಾಯಾಲಯಕ್ಕೆ ಹೋಗಿ ಎಂದು ಹೇಳುತ್ತಾರೆ. ಹಾಗೆ ಅವರು ಹೋಗಿ ನ್ಯಾಯಾಲಯದಿಂದ ಆರ್ಡರ್ ಪಡೆದುಕೊಂಡರೂ ಕೂಡ ಇದುವರೆಗೂ ವಿಶೇಷ ಜಿಲ್ಲಾಧಿಕಾರಿಗಳು ಹಣ ಬಿಡುಗಡೆ ಮಾಡಿಲ್ಲ. ಮೊನ್ನೆ ಬೆಳಗಾಂ ಜಿಲ್ಲೆಯಲ್ಲಿ ಹುಕ್ಕೇರಿ ತಾಲ್ಲೂಕಿನಲ್ಲಿ ಒಂದು ಕೋರ್ಟಿನಿಂದ ಆದೇಶವನ್ನು ಪಡೆದುಕೊಂಡು ಆಫೀಸನ್ನು ಜಪ್ತಿ ಮಾಡುವಂಥ ಪರಿಸ್ಥಿತಿಯನ್ನು ತಂದರು. ಪ್ರತಿಸಾರಿ ವಿಶೇಷ ಜಿಲ್ಲಾಧಿಕಾರಿ ಆಫೀಸಿನವರು ಜಪ್ತಿಮಾಡಿ ಸಾಮಾನನ್ನೆಲ್ಲಾ ಹೊರಗೆ ತಂದಿಟ್ಟು ಅವಮಾನ ಮಾಡುವ ವ್ಯವಸ್ಥೆ ನಡೆಯುತ್ತದೆ. ಆದ್ದರಿಂದ ದಯವಿಟ್ಟು ಸರ್ಕಾರದವರು ಎಲ್ಲೆಲ್ಲಿ ಭೂಮಿಯನ್ನು ಕಳೆದುಕೊಂಡಿದ್ದಾರೆ, ಆ ಭೂಮಾಲೀಕರಿಗೆ ಹಣವನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕು. 1976 ರಿಂದ ಸುಮಾರು 12 ಕೇಸ್‌ಗಳು ಹಿಡಕಲ್ ಡ್ಯಾಮ್‌ನಲ್ಲಿ ಇನ್ನೂ ಇತ್ಯರ್ಥವಾಗದೆ ಹಾಗೇ ಉಳಿದಿವೆ. ದಯವಿಟ್ಟು ಇದರ ಬಗ್ಗೆ ಸರ್ಕಾರ ಹೇಳಿಕೆ ನೀಡಬೇಕೆಂದು ನಾನು ಕೇಳುತ್ತೇನೆ.

ಶ್ರೀ ಕೆ. ಎನ್. ನಾಗೇಗೌಡ (ಭಾರಿ ನೀರಾವರಿ ಮಂತ್ರಿ) : ಮಾನ್ಯ ಉಪಾಧ್ಯಕ್ಷರೇ, ಹಿಡಕಲ್ ಡ್ಯಾಮ್‌ನಲ್ಲಿ 1976ರಲ್ಲಿ ಆಗಿರತಕ್ಕಂಥದ್ದಕ್ಕೆ ಭೂಪರಿಹಾರ ಕೊಡಬೇಕು ಎನ್ನತಕ್ಕಂಥ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ನಾವು ಹೊಸ ಕಾಯಿದೆಯನ್ನು ಮಾಡಿದ್ದೇವೆ. ನಾವು ನೀರಾವರಿ ಇಲಾಖೆಯಿಂದ ಈ ಭೂಪರಿಹಾರ ಹಣ ಕೊಡತಕ್ಕಂಥ ಕೆಲಸ ಮಾಡಿರುವುದರಿಂದ ಕಾಂಟ್ರಾಕ್ಟ್

ಕೊಡುವುದಕ್ಕಿಂತ ಮುಂಚಿತವಾಗಿ ಯಾರು ಜಮೀನನ್ನು ಕಳೆದುಕೊಂಡಿದ್ದಾರೆ, ಯಾರು ಮನೆ ಕಳೆದು ಕೊಂಡಿದ್ದಾರೆ, ಆ ಭೂಮಾಲೀಕರಿಗೆ ಮೊದಲು ಹಣ ಕೊಡತಕ್ಕಂಥಾದ್ದು ಎಂದು ಸರ್ಕಾರದ ಆದೇಶ ಮಾಡಿದ್ದೇವೆ. ಬಹುಶಃ ಹೊಸ ಪ್ರಾಜೆಕ್ಟ್‌ಗಳಲ್ಲಿ ಇದು ಆಗಿದೆ. ಆದರೆ 1976ರಲ್ಲಿ ಹಿಡಕಲ್ ಡ್ಯಾಮ್‌ನಲ್ಲಿ ಏನಾಗಿದೆ, ಇದು ನನಗೆ ಗೊತ್ತಿರಲಿಲ್ಲ. ತಾವು ಈಗ ಹೇಳಿದ್ದೀರಿ. ಲ್ಯಾಂಡ್ ಅಕ್ವಿಸಿಷ್ನ್ ಆಫೀಸರ್ ನಮ್ಮ ನೀರಾವರಿ ಇಲಾಖೆಗೆ ಸೇರುತ್ತಾರೆ. ಅವರಿಗೆ ಯಾವುದು ಕೋರ್ಟಿನಲ್ಲಿ ಇತ್ಯರ್ಥವಾಗಿದೆ, ಯಾವುದು ಕನ್‌ಸೆಂಟ್ ಅವಾರ್ಡ್ ಆಗಿದೆ, ಎಷ್ಟು ಹಣ ಬಿಡುಗಡೆಯಾಗಬೇಕು, ಎಂಬುದಕ್ಕೆ ನನ್ನ ಹತ್ತಿರ ಸಧ್ಯಕ್ಕೆ ಮಾಹಿತಿ ಇಲ್ಲ. ಅದನ್ನು ತರಿಸಿಕೊಂಡು ಈಗಾಗಲೇ ಇತ್ಯರ್ಥ ಆಗಿರತಕ್ಕಂಥ ಪ್ರಕರಣಗಳಿಗೆ ಕೂಡಲೇ ಹಣ ಬಿಡುಗಡೆ ಮಾಡಬೇಕು ಎಂದು ಹೇಳಿ ನಮ್ಮ ಚೀಫ್ ಇಂಜಿನಿಯರ್ ಅವರಿಗೆ ಇವತ್ತೇ ನಾನು ಕಳುಹಿಸಿಕೊಡುತ್ತೇನೆ.

(ಉ) ಮಾಜಿ ಯೋಧರಿಗೆ ಸಕಲೇಶಪುರ ತಾಲ್ಲೂಕಿನಲ್ಲಿ ಆಗಿರತಕ್ಕ ತೊಂದರೆ

ಶ್ರೀ ಡಿ. ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಅಧ್ಯಕ್ಷರೇ, ಈ ಸರ್ಕಾರ ನಮಗೆ ಏನೂ ಕೊಡುತ್ತಾ ಇಲ್ಲ. ಆದರೆ ಮಾಜಿ ಯೋಧರಿಗೆ ಇರುವಂಥ ಹಕ್ಕನ್ನೂ ಕಸಿಯುವಂಥ, ನಿರಾಕರಿಸುವಂಥ ವ್ಯವಸ್ಥೆ ಸಕಲೇಶಪುರ ತಾಲ್ಲೂಕಿನಲ್ಲಿ ಆಗಿದೆ. ಯಾರು ದೇಶದ ರಕ್ಷಣೆಗಾಗಿ ತಮ್ಮ ಸರ್ವಸ್ವವನ್ನೂ ಕೊಡುತ್ತಾರೆ, ಅವರಿಗೆ ಕಾನೂನು ಪ್ರಕಾರ ಸಿಗುವ ಸವಲತ್ತನ್ನು ಅಡ್ಡಿ ಮಾಡುವಂಥ ಸಂಗತಿ ಇದು. ಮೈಸೂರು ಗೆಜೆಟ್‌ನ ಮೇ 18, 1972 ರಲ್ಲಿ ಪಾರ್ಟ್-3 ರಲ್ಲಿ ಮೇ 3, 92ರ ಒಂದು ನೋಟಿಫಿಕೇಷನ್ ಪ್ರಕಾರ ಸಕಲೇಶಪುರ ತಾಲ್ಲೂಕಿನ ಹೆಬ್ಬಸಾಲೆ ಗ್ರಾಮದಲ್ಲಿ ಸರ್ವೆನಂಬರ್ 329ರಲ್ಲಿ ಇಪ್ಪತ್ತು ಎಕರೆ ಜಾಗವನ್ನು ಎಕ್ಸಸರ್ವಿಸ್‌ಮನ್ ಮತ್ತು ಸೋಲ್ಜರ್ಸ್‌ಗೆ ಮೀಸಲಾಗಿಡಲಾಗಿತ್ತು. ಆದರೆ ಇದೇ ರೀತಿ ಭಾರತ ಭೂಸೇನೆಯಲ್ಲಿ ಕೆಲಸ ಮಾಡುತ್ತಾ ಇರುವಂಥ ಕೆ. ಜಿ. ಸುಬ್ರಹ್ಮಣ್ಯ ಮತ್ತು ಕೆ. ಎಂ. ಗಣಪತಿ ಎಂದು ಹೇಳುವವರು 7-9-92ಕ್ಕೆ ಈ ಬಗ್ಗೆ ಅರ್ಜಿಯನ್ನು ಸಲ್ಲಿಸಿದ್ದು ಆ ಬಗ್ಗೆ ಶಾನುಭೋಗರಿಂದ ಮಹಜರು, ರೆವಿನ್ಯೂ ಇನ್‌ಸ್ಪೆಕ್ಟರ್ ಅವರಿಂದ ಕಡತ ಪರಿಶೀಲನೆ, ಗ್ರಾಮಸ್ಥರಿಂದ ಮಹಜರು, ಆರ್. ಎಫ್. ಓ. ಅವರಿಂದ ಮರದ ಮೌಲ್ಯಮಾಪನ, ತಹಸೀಲ್ದಾರರಿಂದ ನಡವಳಿಕೆ, ಕಾಫಿ ಬೋರ್ಡಿನಿಂದ ಸರ್ಟಿಫಿಕೇಟ್ ಅಲ್ಲದೆ ಉಪವಿಭಾಗಾಧಿಕಾರಿಯಿಂದ ಒಂದು ಎಕರೆಗೆ ಒಂದು ಸಾವಿರ ಕಿಮ್ಮತ್ತು ನೀಡಿ ಮಂಜೂರು ಮಾಡುವಂತೆ ಜಿಲ್ಲಾಧಿಕಾರಿಗಳಿಂದ ಶಿಫಾರಸ್ಸು ಕೂಡ ಆಗಿತ್ತು. ಇಷ್ಟಾದರೂ ಕೂಡ ಕಂದಾಯ ಇಲಾಖೆ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ಅವರು ನ್ಯಾಯಕ್ಕಾಗಿ ಕರ್ನಾಟಕ ಉಚ್ಚನ್ಯಾಯಾಲಯಕ್ಕೆ ರಿಟ್ ಪಿಟಿಷನ್ ನಂಬರ್ ನಂ. 316:91ರ ಪ್ರಕಾರ ಇದನ್ನು ಕೂಡಲೇ ಪರಿಶೀಲನೆ ಮಾಡಿ ಇತ್ಯರ್ಥ ಮಾಡಬೇಕೆಂದು ಕೇಳಿಕೊಂಡರು. 3-11-97ಕ್ಕೆ ಹೈಕೋರ್ಟು ಆದೇಶವನ್ನು ನೀಡಿ ತಕ್ಷಣ ಇದನ್ನು ಇತ್ಯರ್ಥ ಮಾಡಬೇಕೆಂದು ಹೇಳಿದರೂ ಕೂಡ ಕಂದಾಯ ಇಲಾಖೆ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಇಷ್ಟಾದಮೇಲೆ ಕಂದಾಯ ಇಲಾಖೆಯ ಕಾರ್ಯದರ್ಶಿ ಯವರಿಗೆ ನಮ್ಮ ಬಿ. ಬಿ. ಶಿವಪ್ಪನವರು ಪತ್ರ ಬರೆದಿದ್ದಕ್ಕೆ ಉಚ್ಚ ನ್ಯಾಯಾಲಯದ ಆದೇಶ ಪ್ರಕಾರ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ಹೇಳಿ ಡಿ. ಸಿ. ಹಾಸನ ಅವರಿಗೆ ಸೂಚನೆ ಕಳಿಸಿದ್ದಾರೆ ಎಂದು ತಿಳಿಸಿದರು, ಆದರೂ ಕೂಡ ಅದರ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ಪುನಃ ಅವರು